ಕೈಗೆತ್ತಿಕೊಳ್ಳಲು ಹಾಗೂ ಈ ಯೋಜನೆಗೆ ಅವಶ್ಯವಿರುವ ಜಮೀನುಗಳನ್ನು ಉಚಿತವಾಗಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಗಾಗಿ ಒಟ್ಟು 940 ಎಕರೆ ಭೂಸ್ವಾಧೀನ ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆಂದು ರೈಲ್ವೆ ಇಲಾಖೆಯು ವರದಿ ಮಾಡಿರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಇದುವರೆಗೂ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜು

225 (270), ಶ್ರೀ ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳೆಷ್ಟು;

ಆ) ಈ ಕಾಲೇಜುಗಳು ಎಲ್ಲೆಲ್ಲಿ, ಯಾವ ವರ್ಷ ಆರಂಭವಾಗಿದೆ (ವಿವರ ಒದಗಿಸುವುದು);

ಇ) ಯಾದಗಿರಿ ಜಿಲ್ಲೆಯಾಗಿ ಐದು ವರ್ಷಗಳೇ ಆದರೂ ಈ ಹಿಂದುಳಿದ ಪ್ರದೇಶದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಯಾದಗಿರಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಸರ್ಕಾರ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ರಾಜ್ಯದಲ್ಲಿ ಪ್ರಸ್ತುತ 10 ಹಗಲು ಹಾಗೂ 1 ಸಂಜೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿರುತ್ತವೆ.

ಆ)

ಕ್ರ. ಸಂ	ಸಂಸ್ಥೆಯ ಹೆಸರು	ಪ್ರಾರಂಭವಾದ ವರ್ಷ	ಸರ್ಕಾರಿ ಆದೇಶ ಸಂಖ್ಯೆ & ದಿನಾಂಕ
1	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ.	2007–08	ಇಡಿ 60 ಟಿಇಸಿ 2007, ದಿನಾಂಕ 25.05.2007
2	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ.	2007–08	ಇಡಿ 60 ಟಿಇಸಿ 2000(2), ದಿನಾಂಕ 12.07.2007
3	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ.	2007–08	ಇಡಿ 60 ಟಿಇಸಿ 2007(1), ದಿನಾಂಕ 25.07.2007
4	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ.	2007–08	ಇಡಿ 60 ಟಿಇಸಿ 2007, ದಿನಾಂಕ 12.07.2007
5	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ.	2007–08	ಇಡಿ 60 ಟಿಇಸಿ 2007, ದಿನಾಂಕ 06.07.2007
6	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ.	2007–08	ಇಡಿ 60 ಟಿಇಸಿ 2007(2), ದಿನಾಂಕ 25.05.2007
7	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ.	2007–08	ಇಡಿ 83 ಟಿಇಸಿ 2007, ದಿನಾಂಕ 28.06.2007
8	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು.	2007–08	ಇಡಿ 60 ಟಿಇಸಿ 2000(1), ದಿನಾಂಕ 12.07.2007
9	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ.	2009–10	ಇಡಿ 191 ಯೋಯೋಕ 2008, ದಿನಾಂಕ 26.06.2009
10	ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು (ಹಗಲು ಮತ್ತು ಸಂಜೆ)	1938	ಇಡಿ 16 ಟಿಇಸಿ 2008, ದಿನಾಂಕ 03.05.2008

ಇ) ಬಂದಿದೆ.

ಈ) ಅನುದಾನದ ಲಭ್ಯತೆ ಅಗತ್ಯತೆಗನುಗುಣವಾಗಿ ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಎಐಸಿಟಿಇ ಅನುಮತಿ ಅನುಸಾರ ಹೊಸ ಕಾಲೇಜನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಪದವಿ ಕಾಲೇಜಿನ ಅವ್ಯವಸ್ಥೆ

226 (271), ಶ್ರೀ ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ಜಿಲ್ಲಾ ಕೇಂದ್ರದಲ್ಲಿರುವ ಸರ್ಕಾರಿ ಪದವಿ ಕಾಲೇಜೂ ನಾನಾ ಸೌಲಭ್ಯಗಳ ಕೊರತೆಯಿಂದ ನರಳುತ್ತಿದ್ದು, ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳು ಇರುವ ಈ ಕಾಲೇಜಿನಲ್ಲಿ ಎಲ್ಲಾ ವಿಷಯಗಳಲ್ಲೂ ಪೂರ್ಣಕಾಲಿಕ ಉಪನ್ಯಾಸಕರು, ವ್ಯವಸ್ಥಾಪಕರು, ದ್ವಿತೀಯ/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಾಲೇಜು ಕಟ್ಟಡದ ನೆಲಹಾಸು ದುರಸ್ತಿ, ಶೌಚಾಲಯ ದುರಸ್ತಿ, ಕಾಂಪೌಂಡ್, ನಿರ್ಮಾಣ ಕಾಮಗಾರಿಗಳು ಬಾಕಿ ಇದ್ದು ಪೀಠೋಪಕರಣಗಳ ಕೊರತೆಗಳಿಂದ ಶೈಕ್ಷಣಿಕ ವಾತಾವರಣ ಇಲ್ಲದಂತಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸ್ನಾತಕೋತ್ತರ ವಿಭಾಗಗಳಿಗೆ ಪ್ರತ್ಯೇಕ ಕಟ್ಟಡದ ಅಗತ್ಯವಿದ್ದರೂ ಸರ್ಕಾರ ಕೊಠಡಿಗಳ ನಿರ್ಮಾಣ ಕಾಮಗಾರಿ ಕೈಗೊಳ್ಳದೇ ಇರಲು ಕಾರಣವೇನು?